ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| Form No.4. Deposition Sheets (R.P.No.7) | **ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ 2ನೇ ನ್ಯಾಯಾಲಯ, ಶಿವಮೊಗ್ಗ** |
|---|---|

**C.C. No. 165/2024** ಪ್ರಾ.ಸಾ.: 06

ಚಾ.ಸಾ.: 06

| | |
|---|---|
| ಸಾಕ್ಷಿಯ ಹೆಸರು | ಎನ್ ರಮೇಶ್, |
| ತಂದೆಯ ಹೆಸರು | ನಂದ್ಯಾನಾಯ್ಕ, |
| ವಯಸ್ಸು | 49 ವರ್ಷ, |
| ಉದ್ಯೋಗ | ಎ ಎಸ್ ಐ, ಪೂರ್ವ ಸಂಚಾರಿ ಪೋ. ಠಾಣೆ, ಶಿವಮೊಗ್ಗ |
| ವಾಸಸ್ಥಳ | ಶಿವಮೊಗ್ಗ. |

ಸಾಕ್ಷಿಯನ್ನು ದಿಃ 30.07.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

2018 ರಿಂದ 2022 ನಾನು ದೊಡ್ಡಪೇಟೆ ಪೋಲಿಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 16.09.2021 ರಂದು ನಾನು ರಾತ್ರಿ ಠಾಣಾ ಪ್ರಭಾರದಲ್ಲಿ ಇದ್ದಾಗ 8.30 ಗಂಟೆಗೆ ಚಾಸಾ 1 ರವರು ಹಾಜರಾಗಿ ನೀಡಿದ ಗಣಕಿ ಕೃತ ದೂರನ್ನು ಸ್ವೀಕರಿಸಿ ಠಾಣಾ ಗುನ್ನಾ ನಂ. 310/2021 ಬಾ. ದ. ಸ. ಕಲಂ 504, 506, 520 ರ ಅಡಿಯುಲ್ಲಿ ಪ್ರಕರಣವನ್ನು ದಾಖಲಿಸಿ ಮಾನ್ಯ ನ್ಯಾಯಾಲಯಕ್ಕೆ ಪ್ರ.ವ.ವರದಿಯನ್ನು ನಿವೇದಿಸಿಕೊಂಡಿರುತ್ತೇನೆ. ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ 7 ರವರಿಗೆ ವಹಿಸಿಕೊಟ್ಟಿರುತ್ತೇನೆ.

ಸಾಕ್ಷಿಗೆ ನಿಪಿ-1 ಗುರುತಿಸಿದ್ದರಿಂದ ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು, ಪ್ರ ವ ವ, ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-41 ಎಂದು, ಸಾಕ್ಷಿಯ ಸಹಿಯನ್ನು ನಿಪಿ-41(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃಆರೋಪಿತರ ಪರ ಶ್ರಿ ಜಿ.ಒ.ಕೆ. ವಕೀಲರಿಂದಃ

ನಿಪಿ 1 ದೂರಿನಲ್ಲಿರುವ ಸಂಗತಿಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ನಿಪಿ 1 ದೂರಿನಲ್ಲಿ ಚಾಸಾ- 1 ರವರ ಕಂಪನಿಗೆ ಆರೋಪಿ ವಂಚನೆ ಮಾಡಿರುವ ಬಗ್ಗೆ ನಮೂದಿಸಿರುತ್ತದೆ. ಚಾಸಾ 1 ರವರ ಕಂಪನಿ ಮತ್ತು ಆರೋಪಿತನ ನಡುವಿನ ಸಂಬಂದದ ಬಗ್ಗೆ ವಿಚಾರಣೆ ಮಾಡಿರುತ್ತೇನೆ. ಆರೋಪಿತನು ಪಿರ್ಯಾದುದಾರರ ಕಂಪನಿಯಿಂದ

ಫ್ರಾಂಚೈಸಿ ಪಡೆದುಕೊಂಡಿದ್ದುಅನುಸೋಲಾರ್ ಎನ್ನುವ ಹೆಸರಿನಲ್ಲಿ ವ್ಯವಹಾರ ಮಾಡುತ್ತಿದ್ದರು. ಚಾಸಾ– 1 ರವರಿಗೆ ಸಹಾಯ ಮಾಡಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ– ಇರುವುದಿಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ.

2ನೇ ಜೆ.ಎಂ.ಎಫ್.ಸಿ. ನ್ಯಾಯಧೀಶರು, ಶಿವಮೊಗ್ಗ.